———ಮಾಹೇ ಬಗ್ಗೆ———ನಿಂದ ವಾಸ ಮಾಡಲ್ಪಡುವ ಪಬ್ಲಿಕ್ ಕಟ್ಟಡದ ಬಾಡಿಗೇ ಬಾಬತು———
ರೂಪಾಯಿಗಳು———ಮಾರೀಫತ್———ಎಗ್ಜಿಕ್ಯೂಟಿವ್ ಯಿಂಜನೀಯರವರಿಂದ ಬಂದಿರುತ್ತೆ.

ಬಾಡಿಗೇ ಮೊಬಲಗುಗಳು ಡಿಸ್ಟ್ರಿಕ್ಟ್ ಟ್ರೆಜರೀ ಲೆಕ್ಕಗಳಲ್ಲಿ, ಮಾಮೂಲ್ ತಪಶೀಲ್‌ನೀ "ಎಗ್ಜಿಕ್ಯೂಟಿವ್ ಇಂಜನೀಯರವರಿಂದ ಬಂದ ಮೊಬಲಗ್" ಯಂಬುದಾಗಿ ಜಮೇ ಕಟ್ಟಲ್ಪಡತಕ್ಕದ್ದು.

H. HUDSON,
Dy. Acclt. Genl. in Mysore.

ಫಾರೆಸ್ಟ್ ಇಲಾಖಾ.

1873ನೇ ಇಸವೀ ನವಂಬರ್ 8ನೇ ಮುಕ್ತಂ ಮೈಸೂರು ಗೆಜೆಟ್ 2ನೇ ಭಾಗ 293ನೇ ಪುಟದಲ್ಲಿ ಪ್ರಕಟಿಸಲ್ಪಟ್ಟ 1873ನೇ ಯಿಸವೀ ನವಂಬರ್ 3ನೇ ಮುಕ್ತಂ 2ನೇ ನಂಬರ್‌ವುಳ್ಳ ಈ ಆಫಿಸ್ ಯಿಸ್ತಿಹಾರ್‌ನಾಮೆಯನ್ನು ರದ್ದುಪಡಿಸಿ 1876ನೇ ಯಿಸವೀ ಡಿಶಂಬರ್ 15ನೇ ಮುಕ್ತಂ ಲಗಾಯತ್ ಮೈಸೂರುಸೀಮೆಯ ಗವರ್ಮೆಂಟ್ ಕೋಠಿಗಳಲ್ಲಿ ಯಾವ ಚಿಲ್ಲರೆ ದರಕ್ಕೆ ಸಂದಲ್ ಮಾರಲ್ಪಡುತ್ತೋ ಅಂತಾ ದರಗಳ ಬಾಬತು ಈ ಕೆಳಗೆ ನಮೂದಿಸುವ, ಪರಿಷ್ಕರಿಸೋಣಾದ ಪಟ್ಟಿಯು ಸಕಲಜನಗಳಿಗೂ ತಿಳಿಯುವ ಬಗ್ಗೆ ಫಾಯಿಷ್ ಮಾಡಲ್ಪಟ್ಟಿರುತ್ತೆ.

ಅವ್ವಲ್ ತರಹಾ	ಟ್ಕ 1ಕ್ಕೆ	ರೂಪಾಯಿ	900	ಅವ್ವಲ್ ತರಹಾ	ಟ್ಕ 1ಕ್ಕೆ	ರೂಪಾಯಿ	
ದುಯ್ಯಂತರಹಾ	,,	,,	870	ಜಬ್ ಪೊಕಲ್	,,	,,	450
ಸಿಯ್ಯಂ ತರಹಾ	,,	,,	850	ಬಗರ್ ಆದದ್	,,	,,	480
ಚಾರಂ ತರಹಾ	,,	,,	760	ಬುಕಣಿ	,,	,,	330
ಪಾಂಜಂತರಹಾ	,,	,,	640	ಜಕ್ಕೇ ಪುಡಿ	,,	,,	150
ಜಡ	,,	,,	550				

2 ದರೋಬಸ್ತು ಅಪ್ಲಿಕೇಷ್ಟಗಳೂ, ಫಾರೆಸ್ಟು ಡಿವಿಜ್ಟಗಳ ಯ್ಟಿಜಾರ್ಜ್ಟ ಡೆಪ್ಯುಟಿಯಾ ಆ॥ ಕ್ಟನರ್‌ವೇಟರ್‌ಗಳಿಗೆ ಬರೆದುಕೊಳ್ಳತಕ್ಕದ್ದು.

3. ಪ್ರತಿ ಕ್ಲಾಸ್‌ನಲ್ಲಿಯೂ ಬಂದು ಟ್ಕಗಿಂತ ಜಾಸ್ತೀಯಾದ ಮೊತಕ್ಕೆ ಬರುವ ಅಪ್ಲಿಕೇಷ್ಟಗಳು ಅಂಗೀಕರಿಸಲ್ಪಡಲಾರದು.

4. ದರೋಬಸ್ತು ಚಿಲ್ಲರೆ ಬಿಕರೀಗೂ ನಗದೇಪಾವತೀ ಮಾಡಬೇಕು ಖರೀದೀ ಮಾಡಿದ ಸಂದಲನ್ನು ಕೂಡ್ಲೆ ಸಾಗಿಸಬೇಕು.

G. J. VAN SOMEREN, *Captain,*
Conservator of Forests, Mysore & Coorg.

BANGALORE DISTRICT.

ಬೆಂಗಳೂರು ಡಿಸ್ಟ್ರಿಕ್ಟ್.

ತಾರೀಖು 11ನೇ ಆಕ್ಟೋಬರ್ 1876.

ಸಕಲಜನಗಳಿಗೂ ತಿಳಿಯುವ ಬಗ್ಗೆ ಯಿದರಿಂದ ತಿಳಿಸಲ್ಪಡುವದೇನಂದರೆ,—(ಫಾರೆಸ್ಟು ಯಿಲಾಖೆಗೆ ಸೇರಿದ ಜಂಗ್ಲೀಗಳು ತಿವಾಯಿ) ಬೆಂಗಳೂರು ಡಿಸ್ಟ್ರಿಕ್ಟ್ ಜಂಗ್ಲೀಗಳ ಬಾಬತು ಅರಗಿನ ಕಂಟ್ರಾಕ್ಟ್ 1877—78,—1878—79,—1879-80, 1880—81, ಮತ್ತು 1881—82ನೇ ಇಸವೀಗಳಿಗೆ ಅಂದರೆ, 1877ನೇ ಏಪ್ರಿಲ್ 1ನೇ ಮುಕ್ತಂ ಲಗಾಯತ್ 1882ನೇ ಮಾರ್ಚೀ 31ರ ವರಿಗೆ ಡಿಸ್ಟ್ರಿಕ್ಟ್ ವಾರಾಗಿ ಜಡ್ ದರಖಾಸ್ತು ದಾರ್ರಿಗೆ ಹರಾಜ್ ಮೂಲಕ 1877ನೇ ಮಾರ್ಚೀ 10ನೇ ಮುಕ್ತಂ 12 ಘಂಟೆಗೆ ಬೆಂಗಳೂರು ಡಿಸ್ಟ್ರಿಕ್ಟ್ ಆಫಿಸ್‌ನಲ್ಲಿ ವಿಕ್ರಯಿಸಲ್ಪಡುವದು.

2. ಐದು ವರುಷಗಳ ವರಿಗೆ, ಆಯಾ ವರುಷದ ಜಡ್ ದರಖಾಸ್ತುದಾರನು, ತನ್ನ ದರಖಾಸ್ತು ಮಂಜೂರಾದ ಮೇಲೆ, ಕರ್ನಸೀ ನೋಟುಗಳು ಯಾ ನಗದು ಹಣ ಆರು ಖಿಸ್ತುಗಳಿಗೆ ಯಾ ಮಾಹೇವಾರೀ ಇನ್‌ಸ್ಟಾಲ್‌ಮೆಂಟ್‌ಗಳಿಗೆ ಸಮನಾದ ಡಿಪಾಜಿಟ್ಟನ್ನು ಹಾಜರ್ ಮಾಡತಕ್ಕದ್ದು. ಅಂತಾ ಪ್ರತಿ ಖಿಸ್ತು ಸಾಲೀಯಾನಾ ದರಖಾಸ್ತು ಮೊಬಲಗ್ ಪೈಕೀ ಹನ್ನೆರಡರಲ್ಲಿ ಒಂದು ಹಿಸ್ಸೆಗೆ ಅಥವಾ ಒಟ್ಟು ಕಂಟ್ರಾಕ್ಟ್ ಮೊಬಲಗ್ ಪೈಕೀ 60ರಲ್ಲಿ ಒಂದು ಹಿಸ್ಸೆಗೆ ಸಮನಾಗಿರತಕ್ಕದ್ದು. ಹಾಂಗೆ ಪಾವತೀ ಮಾಡಲಿಕ್ಕೆ ಅವನು ತಪ್ಪಿದ ಪಕ್ಷಕ್ಕೆ ಸದರೀ ಕಂಟ್ರಾಕ್ಟ್ ಕೂಡ್ಲೆ ಪುನಶ್ಚ ಹರಾಜ್ ಹಾಕಲ್ಪಟ್ಟು ಆ ಮೂಲಕ ಸರ್ಕಾರಕ್ಕೆ ಬರುವ ನುಕ್ಸಾನಿಗೆ ಅವನನ್ನು ಗುರಿಮಾಡಲಾಧೀತು.